## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 548/2021

**ಸಾಕ್ಷಿಯನ್ನು ದಿಃ 21.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಶಂಕರ್ | ಸಿಡಬ್ಲ್ಯೂ:1 | ಪಿಡಬ್ಲ್ಯೂ:1 |
| ತಂದೆಯ ಹೆಸರು | ಶಿವಣ್ಣ | | |
| ವಯಸ್ಸು | 68 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸಸ್ಥಳ | ಕಿರಿಜಾಜಿ, ಹುಣಸೂರು | | |

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 299 ರಡಿ ಸಾಕ್ಷಿ ವಿಚಾರಣೆ**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಈ ಕೇಸ್ ನ ಆರೋಪಿ ಮಹೇಶ್ ಗೊತ್ತು. ಚಾಸಾ 2 ರಿಂದ 7 ರವರು ಗೊತ್ತು. ಈಗ್ಗೆ 4-5 ವರ್ಷಗಳ ಹಿಂದೆ ಶಾಲೆಯಲ್ಲಿ ಮೀಟಿಂಗ್ ಇದೆ ಎಂದು ಅದನ್ನು ಮುಗಿಸಿಕೊಂಡು ವಾಪಸ್ಸು ಬರುವಾಗ ಬೆಳಿಗ್ಗೆ 11-11.30 ಗಂಟೆ ಸುಮಾರಿಗೆ ನಮ್ಮ ಊರಾದ ಕಿರಿಜಾಜಿ ಸರ್ಕಲ್ ಬಳಿ ಗಲಾಟೆ ನಡೆಯುತ್ತಿದ್ದು, ಆರೋಪಿ ಮತ್ತು ಚಾಸಾ 2 ಮತ್ತು 3 ರವರು ಗಲಾಟೆ ಮಾಡಿಕೊಳ್ಳುತ್ತಿದ್ದರು. ಶಾಲೆಯಿಂದನಾನು ಬರುವಾಗ ಮಹೇಶ್ ಎಂಬಾತ ನನಗೆ ಮೊದಲು 1 ಕಲ್ಲಿನಿಂದ ನಂತರ ಅದು ಸಿಗದ ಕಾರಣ ಪುನಃ ಇನ್ನೆರಡು ಕಲ್ಲುಗಳಿಂದ ಹಣೆಗೆ ಹೊಡೆದಿರುತ್ತಾನೆ. ಆಗ ನಾನು ತೀವ್ರಗಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನನಗೆ ಹೊಲಿಗೆ ಹಾಕಿರುತ್ತಾರೆ. ನಂತರ ಠಾಣೆಗೆ ಬಂದು ದೂರು

ಕೊಟ್ಟಿರುತ್ತೇನೆ. ದೂರನ್ನು ನಿಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 1(ಎ) ಎಂದು ಗುರುತಿಸಲಾಯಿತು.

ದೂರು ಕೊಟ್ಟ ನಂತರ ಅದೆ ದಿನ 4-4.30 ರ ಸುಮಾರು ಸ್ಥಳಕ್ಕೆ ಬಂದು 4.30 ರಿಂದ 5.30 ರ ವರೆಗೆ ಮಹಜರ್ ಮಾಡಿರುತ್ತಾರೆ. ಸದರಿ ಮಹಜರ್ ಅನ್ನು ನಿಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 2(ಎ) ಎಂದು ಗುರುತಿಸಲಾಯಿತು. ಆಗ ನನ್ನ ಜೊತೆ ಚಾಸಾ 2, ನಾಗರಾಜು ಮತ್ತು ಚಾಸಾ 4 ಮತ್ತು 5 ರವರು ಇದ್ದರು. ಪೊಲೀಸರು ಸ್ಥಳದಿಂದ ನನಗೆ ಹೊಡೆದ ಕಲ್ಲನ್ನು ವಶಕ್ಕೆ ಪಡೆದರು. ನ್ಯಾಯಾಲಯದ ಮುಂದಿರುವ ಮೂರು ಕಲ್ಲಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ಒಟ್ಟಾಗಿ **ಮು.ಮಾ 1** ಎಂದು ಗುರುತಿಸಲಾಯಿತು. ನಾನು ಪೊಲೀಸರ ಮುಂದೆ ಮರು ಹೇಳಿಕೆ ಕೊಟ್ಟಿಲ್ಲ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲು ಸಸಅ ರವರಿಂದಃ-**

ಗಲಾಟೆ ಆದ ದಿಃ 10.06.2020 ರಂದು ಎಂದರೆ ಸರಿ. ಆರೋಪಿ ಮಹೇಶ್ ತನ್ನ ತಾಯಿ ಜೊತೆ ಗಲಾಟೆ ಮಾಡುತ್ತಿರುವಾಗ ಅದನ್ನು ಬಿಡಿಸಲು ಹೋದ ಚಾಸಾ 2 ಮತ್ತು 3 ರವರು ಕಲ್ಲಿನಿಂದ ಮಹೇಶ ಹೊಡೆದಿರುತ್ತಾನೆ ಎಂರದೆ ಸರಿ . ಆರೋಪಿ ನಮಗೆಲ್ಲಾ ಕೆಟ್ಟ ಶಬ್ದಗಳಿಂದ ಬೈದಿರುತ್ತಾನೆ ಎಂದರೆ ಸರಿ. ಚಾಸಾ 4 ಮತ್ತು 5 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ದಿಃ 10.06.2020 ರಂದು ಗಲಾಟೆ ಮಾಡುತ್ತಿದ್ದ ಆರೋಪಿ

ಮಹೇಶ್ ನನ್ನು ನಾನು ಸಮಾಧಾನ ಮಾಡಲು ಹೋದಾಗ ಆತ ನನಗೂ ಹೊಡೆದಿದ್ದ ಎಂದು ನಾನು ಪೊಲೀಸರ ಮುಂದೆ ಮರು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅಲ್ಲಗಳೆದ ಮರು ಹೇಳಿಕೆಯನ್ನು ನಿಪಿ. 3 ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಚಾಸಾ 7 ರವರು ನನ್ನ ಜೊತೆ ಇದ್ದರು ಎಂದರೆ ಸರಿಯಲ್ಲ.

**ಪಾಟೀ ಸವಾಲು ಃಆರೋಪಿ ತಲೆ ಮರಿಸಿಕೊಂಡಿರುತ್ತಾನೆ.**

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.